ಕುಮಟಾ - ಹೊನ್ನಾವರ ಜಂಟಿ ನೀರು ಸರಬರಾಜು ಯೋಜನೆ

500 - ಡಾ|| ಎಂ. ಪಿ.ಕರ್ಕಿ (ಕುಮುಟಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಮುಟಾ ಹೊನ್ನಾವರ ಜಂಟೀ ನೀರಿನ ಯೋಜನೆ ಯಾವ ಹಂತದಲ್ಲಿದೆ.*

ಆ) *ಪ್ರಾಮುಖ್ಯವಾದ ರೈಸಿಂಗಮೈನ್ ಟ್ಯಾಂಕ್ ಕಟ್ಟುವುದು ಮುಂತಾದ ಕೆಲಸಗಳಿಗೆ ಇನ್ನು ಟೆಂಡರ್ ಕರೆದಿಲ್ಲರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ಯೋಜನೆಯನ್ನು ಶೀಘ್ರ ಮುಗಿಸಲು ಕ್ರಮ ಕೈಗೊಳ್ಳಲಾಗುವುದೇ?*

ಈ) *ಈ ನಿಟ್ಟಿನಲ್ಲಿ ಸರ್ಕಾರದ ಪ್ರಯತ್ನಗಳಾವುವು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಈ ಯೋಜನೆಯ ಮೂಲ ಸ್ಥಾವರ ಕಾಮಗಾರಿ ಅಂದರೆ ಜಾಕವೆಲ್ ಮತ್ತು ಪಂಪು ಮನೆ ನಿರ್ಮಾಣ ಮಾಡುವ ಕೆಲಸ ಜಾಕವೆಲ್ ಮತ್ತ ಪಂಪು ಮನೆ ನಿರ್ಮಾಣ ಮಾಡುವ ಕೆಲಸ, ಜಾಕವೆಲನಿಂದ ಶುದ್ಧೀಕರಣಾಗಾರಕ್ಕೆ ಮತ್ತು ಜಲಶುದ್ಧೀಕರಣಗಾರದಿಂದ ಕುಮುಟಾ ಪಟ್ಟಣಕ್ಕೆ 16.50 ಕಿ.ಮೀ.500ಮಿ.ಮಿ. ವ್ಯಾಸದ ಪಿಎಸಸಿ ಪೈಪ್ ಮಾರ್ಗದ ಕೆಲಸ ಮತ್ತು375ಮಿ.ಮಿ. ಪೈಪ್ ಹೊನ್ನಾವರದ ಪಟ್ಟಣಕ್ಕೆ ಮೇಲಿನ ಕೊಳವೆ ಮಾರ್ಗದಿಂದ ನೀರನ್ನು ಹಾಯಿಸುವ ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು ಕೆಲಸಗಳು ಪ್ರಗತಿಯಲ್ಲಿವೆ.

ಆ) ರೈಸಿಂಗಮೈನ್ ಕಾಮಗಾರಿಗೆ ಗುತ್ತಿಗೆದಾರರನ್ನು ಇತ್ತೀಚೆಗೆ ನೇಮಿಸಲಾಗಿದೆ. ಹೊನ್ನಾವರದಲ್ಲಿ ನಿರ್ಮಿಸಬೇಕಾಗಿರುವ ಎರಡು ಮೇಲಮಟ್ಟದ ಜಲ ಸಂಗ್ರಾಹಾಗಾರಗಳಿಗೆ ಗುತ್ತಿಗೆದಾರರನ್ನು ನೇಮಿಸಬೇಕಾಗಿದೆ.

ಇ) ಕ್ರಮ ತೆಗೆದುಕೊಳ್ಳಲಾಗುವುದು.

ಈ) ಈ ನಿಟ್ಟಿನಲ್ಲಿ ಉಳಿದ ಕೆಲಸಗಳಿಗೆ ಗುತ್ತಿಗೆದಾರರನ್ನು ಗೊತ್ತುಪಡಿಸುವಲ್ಲಿ ಶೀಘ್ರದಲ್ಲಿ ಕ್ರಮಕೈಗೊಳ್ಳಲಾಗುವುದು. ಕುಮುಟಾ-ಹೊನ್ನಾವರ 200 ಟ ನೀರು ಸರಬರಾಜು ಯೋಜನೆಯನ್ನು 1996 ಡಿಸೆಂಬರ್ ಅಂತ್ಯಕ್ಕೆ ಚಾಲು ಮಾಡಲು ಉದ್ದೇಶಿಸಲಾಗಿದೆ.

ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರು ಸರಬರಾಜು

501 - ಶ್ರೀ ಎಂ.ಎಸ್. ಕರ್ಜಗಿ (ರಾಣೆಬೆನ್ನೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸಲು ಅಂತರ್ಜಲ ಮಂಡಳಿಯಿಂದ ಕುದ್ರಿಹಾಳ ಕುಡಿಯುವ ನೀರಿನ ಯೋಜನೆಗೆ ಜನರೇಟರ್ ಅಳವಡಿಸುವ ವಿಷಯ ಯಾವ ಹಂತದಲ್ಲಿದೆ?*